ದೂರವಾಣಿ/Phone : 0824-2287276
ಫ್ಯಾಕ್ಸ್/Fax : 0824-2287424
ಇ-ಅಂಚೆ/E-mail : registrar@mangaloreuniversity.ac.in
registrarmangaloreuniversity@gmail.com
ವೆಬ್‌ಸೈಟ್/Website : www.mangaloreuniversity.ac.in

# ಮಂಗಳೂರು ವಿಶ್ವವಿದ್ಯಾನಿಲಯ
# MANGALORE UNIVERSITY
(Accredited by NAAC with' A' Grade)

ಕ್ರಮಾಂಕ/No. ಮಂವಿವಿ/ಸಿಂಡಿ/3/ವಿ.ಸ.3/2018-19/ಎಸ್2

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ – 574 199
ಕರ್ನಾಟಕ, ಇಂಡಿಯ

Office of the Registrar
Mangalagangothri - 574 199
Karnataka, India

ದಿನಾಂಕ/Date : 31.05.2018

ತುರ್ತು ರವಾನೆ

ರಿಗೆ:

ಸಿಂಡಿಕೇಟಿನ ಎಲ್ಲಾ ಸದಸ್ಯರಿಗೆ.

ಮಾನ್ಯರೇ,

ವಿಷಯ: ದಿನಾಂಕ **23.05.2018** ರಂದು ನಡೆದ ಸಿಂಡಿಕೇಟಿನ 2018ನೇ ಸಾಲಿನ ತೃತೀಯ ವಿಶೇಷಷ ಸಭೆಯ ನಡಾವಳಿಯ ಬಗ್ಗೆ.

*******

ದಿನಾಂಕ **23.05.2018** ರಂದು ನಡೆದ ಸಿಂಡಿಕೇಟಿನ 2018ನೇ ಸಾಲಿನ ತೃತೀಯ ವಿಶೇಷ ಸಭೆಯ ನಡಾವಳಿಯನ್ನು ಮುಂದಿನ ಸಿಂಡಿಕೇಟು ಸಭೆಯಲ್ಲಿ ದೃಢೀಕರಿಸುವ ಸಲುವಾಗಿ ಈ ಪತ್ರದೊಂದಿಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ. ಆಕ್ಷೇಪಣೆಗಳು ಇದ್ದಲ್ಲಿ ನಡಾವಳಿ ತಮಗೆ ತಲುಪಿದ ಒಂದು ವಾರದೊಳಗೆ (7 ದಿವಸ) ಲಿಖಿತ ಮೂಲಕ ಕುಲಸಚಿವರಿಗೆ ತಿಳಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ,
31/5/18
ಕುಲಸಚಿವರು.

ಪ್ರತಿಗಳು:

1. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿ, ರಾಜಭವನ ಬೆಂಗಳೂರು – 560 001
2. ಸರಕಾರದ ಪ್ರಧಾನ ಕಾರ್ಯದರ್ಶಿ, (ಉನ್ನತ ಶಿಕ್ಷಣ) ಶಿಕ್ಷಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001.
3. ಕುಲಪತಿಯವರ ಆಪ್ತ ಕಾರ್ಯದರ್ಶಿ / ಕುಲಸಚಿವರ ಆಪ್ತಸಹಾಯಕಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 23.05.2018 ರಂದು ಅಪರಾಹ್ನ ಗಂಟೆ 03:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2018ನೇ ಸಾಲಿನ ತೃತೀಯ ವಿಶೇಷ ಸಭೆಯ ನಡಾವಳಿಗಳು.**

ಉಪಸ್ಥಿತ ಸದಸ್ಯರು:

1. **ಪ್ರೊ. ಕೆ. ಭೈರಪ್ಪ** — ಅಧ್ಯಕ್ಷರು
   ಕುಲಪತಿಗಳು
   ಮಂಗಳೂರು ವಿಶ್ವವಿದ್ಯಾನಿಲಯ,
   **ಮಂಗಳಗಂಗೋತ್ರಿ–574 199.**

2. **ಡಾ. ಈಶ್ವರ ಪಿ.** — ಸದಸ್ಯರು
   ಡೀನರು, ವಾಣಿಜ್ಯ ನಿಕಾಯ
   ಮತ್ತು ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗ
   ಮಂಗಳೂರು ವಿಶ್ವವಿದ್ಯಾನಿಲಯ
   **ಮಂಗಳಗಂಗೋತ್ರಿ–574 199.**

3. **ಶ್ರೀ ಅಶೋಕ್ ಕುಮಾರ್ ರೈ,** — " —
   "ಅನುರಾಗ್", ಡಿ. ನಂ.–2–30–2484/1
   ಕಾಸ್ಮಸ್ ಲೇನ್, ಕದ್ರಿ ಕಂಬ್ಳ, **ಮಂಗಳೂರು**

4. **ಪ್ರೊ. ಸತ್ಯನಾರಾಯಣ ಭಟ್,** — " —
   ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು ,
   ಸಿದ್ಧಕಟ್ಟೆ, **ಬಂಟ್ವಾಳ – 574 237.**

5. **ಪ್ರೊ. ಬಿ. ರಹಮತ್ ಆಲಿ** — " —
   ಪ್ರಾಂಶುಪಾಲರು, ಬದ್ರಿಯಾ ಪ್ರಥಮ ದರ್ಜೆ ಕಾಲೇಜು
   ಕಂದಕ, **ಮಂಗಳೂರು – 575 001**

6. **ಪ್ರೊ. ಗಣಪತಿ ಭಟ್** — " —
   ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು,
   **ಪೂಂಜಾಲಕಟ್ಟೆ – 574 233**

7. **ಡಾ. ಯು. ತಾರಾ ರಾವ್,** — " —
   ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು,
   **ಕಾವೂರು ಮಂಗಳೂರು – 575 015.**

8. **ಶ್ರೀ ವಿಕ್ಟರ್ ವಾಲ್ಟರ್ ನರೋನ್ಹಾ** — " —
   ಬಿನ್ ಡೊಮಿನಿಕ್ ರೊಸಾರಿಯೋ ನರೋನ್ಹ
   ಸೊರ್ನಾಡು ಮನೆ ಮತ್ತು ಅಂಚೆ,
   ಪಂಜಿಕಲ್ಲು ಗ್ರಾಮ, **ಬಂಟ್ವಾಳ ತಾಲೂಕು – 574 211**

9. **ಶ್ರೀ ಗಂಗರಾಜು** — " —
   ಬಿ.ಡಿ. ಬೆಟ್ಟಹಳ್ಳಿ, ದಾಸನಪುರ ಹೋಬಳಿ
   ಕಡಬರೆಗೆ ಅಂಚೆ, **ಬೆಂಗಳೂರು – 562 130**

10. **ಡಾ. ಭಾರ್ಗವಿ ಡಿ. ಹೆಮ್ಮಿಗೆ,** — " —
    ನಂ. 555/N, ಇಂದ್ರಪ್ರಸ್ಥ,
    ನ್ಯೂ ಕಾಂತರಾಜ್ ರಸ್ತೆ, ಕುವೆಂಪು ನಗರ,
    **ಮೈಸೂರು – 570 009**

11. **ಶ್ರೀ ಬಾದ್‌ಷ ಸಾಂಬಾರತೋಟ,** — " —
    ಪಜೀರು ಗ್ರಾಮ, ಕುರ್ನಾಡು ಅಂಚೆ
    ಬಂಟ್ವಾಳ ತಾಲೂಕು, **ಮಂಗಳೂರು 574153**

12. **ಪ್ರೊ. ಎ. ಎಂ. ಖಾನ್** – " –
ಕುಲಸಚಿವರು (ಪರೀಕ್ಷಾಂಗ)
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199.**

13. **ಪ್ರೊ. ಬಿ. ಎಸ್. ನಾಗೇಂದ್ರ ಪ್ರಕಾಶ್** – " –
ಕುಲಸಚಿವರು (ಆಡಳಿತ)
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199.**

**ವಿಶೇಷ ಆಹ್ವಾನಿತರು:**

14. **ಡಾ. ದಯಾನಂದ ನಾಯ್ಕ್** – " –
ಹಣಕಾಸಿನ ಅಧಿಕಾರಿ (ಪ್ರಭಾರ)
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199.**

**ಅನುಪಸ್ಥಿತ ಸದಸ್ಯರು:**

1. **ಶ್ರೀ ಮಹೇಶ್ ರಾವ್.** ಸದಸ್ಯರು
ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಮಂಗಳೂರು
(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ)

2. **ತಾಂತ್ರಿಕ ಶಿಕ್ಷಣ ನಿರ್ದೇಶಕರು** – " –
ಕರ್ನಾಟಕ ರಾಜ್ಯ
ಅರಮನೆ ರಸ್ತೆ, **ಬೆಂಗಳೂರು – 560 001.**

3. **ಶ್ರೀ ಹರೀಶ್ ಆಚಾರ್,** – " –
ಬಿನ್ ರಾಘವ ಆಚಾರ್,
"ರಕ್ಷಾ", ವಿ.ಎಸ್.ಎಸ್. ಬ್ಯಾಂಕಿನ ಹತ್ತಿರ,
ನಾಗುರಿ, ಕಂಕನಾಡಿ –575 002, **ಮಂಗಳೂರು.**

4. **ಕು. ಸೌಮ್ಯ ಸಂಜೀವ,** – " –
ಬಿನ್ ಸಂಜೀವ ಗುರಿಕಾರ
ಬಿಕೋ ಕಂಪನಿ ಹತ್ತಿರ, ಕೋತಲಕಟ್ಟೆ
ಉಳಿಯಾರಗೋಳಿ ಗ್ರಾಮ, ಕಾಪು ಅಂಚೆ,
**ಉಡುಪಿ ಜಿಲ್ಲೆ – 574 106**

5. **ಶ್ರೀ ತೇಜಸ್ವಿ ರಾಜ್** – " –
ಬಿನ್ ಗಂಗಾಧರ್, ನಂ. 602,
ಕ್ಲಾಸಿಕ್ ಹೈಟ್ಸ್ ಅಪಾರ್ಟ್‌ಮೆಂಟ್, ಬಿಜೈ,
**ಮಂಗಳೂರು – 575 005**

6. **ವೈದ್ಯಕೀಯ ಶಿಕ್ಷಣ ನಿರ್ದೇಶಕರು** – " –
ಕರ್ನಾಟಕ ರಾಜ್ಯ, ಆನಂದರಾವ್ ವೃತ್ತ
**ಬೆಂಗಳೂರು – 560 009.**

7. **ಶ್ರೀ ಟಿ. ನಾರಾಯಣ ಗೌಡ** – " –
ಪ್ರಾಂಶುಪಾಲರು
ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ
**ದಕ್ಷಿಣ ಕನ್ನಡ, ಮಂಗಳೂರು** **575001.**
(ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ)

8. **ನಿರ್ದೇಶಕರು** – " –
ಪದವಿ ಪೂರ್ವ ಶಿಕ್ಷಣ ಇಲಾಖೆ
ಪದವಿ ಪೂರ್ವ ಶಿಕ್ಷಣ ಭವನ,
18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ
ಮಲ್ಲೇಶ್ವರಂ, **ಬೆಂಗಳೂರು 560 003.**

*********

<u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 23.05.2018 ರಂದು ಅಪರಾಹ್ನ ಗಂಟೆ 03:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2018ನೇ ಸಾಲಿನ ತೃತೀಯ ವಿಶೇಷ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು**

**ಅನುಪಸ್ಥಿತ ಸದಸ್ಯರು:**

ಮಾನ್ಯ ಕುಲಪತಿಯವರು ಪ್ರಾರಂಭದಲ್ಲಿ ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**ಪ್ರಾರಂಭಿಕ**

1. ಮಾನ್ಯ ಕುಲಪತಿಯವರು, ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸರ್ಕಾರದಿಂದ ನಾಮನಿರ್ದೇಶನಗೊಂಡಿರುವ ಶ್ರೀ ಗಂಗರಾಜು, ಬಿ.ಡಿ.ಬೆಟ್ಟಹಳ್ಳಿ, ದಾಸನಪುರ ಹೋಬಳಿ, ಕಡಬಗೆರೆ ಅಂಚೆ, ಬೆಂಗಳೂರು – 562130 ಇವರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.
2. ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ನೆಲೆಯಲ್ಲಿ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಪ್ರೊ.ಸತ್ಯನಾರಾಯಣ ಭಟ್, ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಕಟ್ಟೆ, ಬಂಟ್ವಾಳ ಇವರ ಸಿಂಡಿಕೇಟು ಸದಸ್ಯತ್ವದ ಒಂದು ವರ್ಷದ ಅವಧಿಯು ಕೊನೆಗೊಂಡು ಸದಸ್ಯತ್ವದಿಂದ ಮುಕ್ತಗೊಂಡಿರುವ ಹಿನ್ನೆಲೆಯಲ್ಲಿ ಸದರಿಯವರು ಸಿಂಡಿಕೇಟ್ ಸದಸ್ಯರಾಗಿ ಸಲ್ಲಿಸಿದ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ದಾಖಲಿಸಲಾಯಿತು.

**ಪ್ರಾಸ್ತಾವಿಕ**

1. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹಣಕಾಸು ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಡಾ.ದಯಾನಂದ ನಾಯ್ಕ್, ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರನ್ನು ಹುದ್ದೆ ಸಹಿತ ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇಲ್ಲಿಗೆ ವರ್ಗಾಯಿಸಲು ನಿರ್ಣಯಿಸಲಾಯಿತು.
2. ಡಾ.ನಾಗಪ್ಪ ಗೌಡ ಆರ್., ವಿಶೇಷಾಧಿಕಾರಿ (ಆಡಳಿತ) ಮತ್ತು ಸಹ ಪ್ರಾಧ್ಯಾಪಕರು, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಹುದ್ದೆ ಸಹಿತ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಂದ ವರ್ಗಾಯಿಸಲು ನಿರ್ಣಯಿಸಲಾಯಿತು.
3. ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಅವರು ದಿನಾಂಕ 23.01.2018ರಂದು ನಡೆದ ಪರೀಕ್ಷಾ ಕಾರ್ಯಗಳ ಸಂಭಾವನೆ ಪರಿಷ್ಕರಣಾ ಸಮಿತಿಯ ನಡಾವಳಿ ಬಗ್ಗೆ ಪ್ರಸ್ತಾಪಿಸಿದ್ದು, ಮಾನ್ಯ ಕುಲಪತಿಯವರು ಪ್ರಸ್ತಾವವನ್ನು ಈ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳಿಸಲು ಕಷ್ಟಸಾಧ್ಯವೆಂದು ತಿಳಿಸಿದ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಕೆಲವೊಂದು ಸಂಭಾವನೆಯನ್ನು ಪರಿಷ್ಕರಿಸಲು ನಿರ್ಣಯಿಸಲಾಯಿತು.

| **1. 1.1.2 Valuation /Paper review of answer scripts of:** | | |
|---|---|---|
| **Particulars** | **Existing Rates** | **Revised Rates** |
| a)3 hours or more than 3 hours duration | Rs.20.00 per script (min .Rs.200.00) | Rs.22.00 per script (min .Rs.200.00) |
| **5. Remuneration to examination centre staff :** | | |
| 5.1.4 Flying Squad | | |
| Leader | D.A. Rs.400.00 | Rs.600.00 |
| Member | D.A. Rs.400.00 | Rs.600.00 |
| **8.2. Revaluation/Challenge Valuation:** | | |
| 8.2.1 Central Valuation: | D.A. Rs.750.00<br>L.C.A. Rs. 550.00 | Rs.850.00<br>Rs.650.00 |

3. ಶ್ರೀ ರಾಜಶೇಖರ ಸವಣೂರು, ಲೈಸನ್ ಆಫೀಸರ್ (ನವದೆಹಲಿ) ಇವರ ಮಾಸಿಕ ಗೌರವ ಸಂಭಾವನೆಯನ್ನು ರೂ.20,000/- ದಿಂದ ರೂ25,000/- ಕ್ಕೆ ಹೆಚ್ಚಿಸಲು ನಿರ್ಣಯಿಸಲಾಯಿತು.

4. ಶ್ರೀ ಮನೋಹರ್ .ಬಿ. ಲೈಸನ್ ಆಫೀಸರ್ (ಬೆಂಗಳೂರು) ಇವರ ಮಾಸಿಕ ಗೌರವ ಸಂಭಾವನೆಯನ್ನು ರೂ.15,000/- ದಿಂದ ರೂ20,000/- ಕ್ಕೆ ಹೆಚ್ಚಿಸಲು ನಿರ್ಣಯಿಸಲಾಯಿತು.

5. ಮಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾ ನಿಯಮಾವಳಿಯ ಪ್ರಕಾರ ಅಧೀನ ಕಾಲೇಜುಗಳು/ ಸಂಯೋಜಿತ ಕಾಲೇಜುಗಳು ಪರೀಕ್ಷಾ ನಿಯಮ ಉಲ್ಲಂಘನೆ ಮಾಡಿದ ಪಕ್ಷದಲ್ಲಿ ಸಂಬಂಧಪಟ್ಟ ಪರೀಕ್ಷಾ ಮುಖ್ಯ ಅಧೀಕ್ಷಕರೇ ಹೊಣೆಯಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿ ನವೆಂಬರ್ /ಡಿಸೆಂಬರ್ 2015ರ ಮರು ಪರೀಕ್ಷೆ ನಡೆಸಿದ ಬಗ್ಗೆ ಪರೀಕ್ಷಾ ಮುಖ್ಯ ಅಧೀಕ್ಷಕರಾದ ಡಾ.ಪಾರ್ವತಿ ಅಪ್ಪಯ್ಯ, ಪ್ರಾಂಶುಪಾಲರು, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರಿಂದ ಮರು ಪರೀಕ್ಷೆಗೆ ಖರ್ಚಾದ ವೆಚ್ಚವನ್ನು ಭರಿಸಲು ನಿರ್ಣಯಿಸಲಾಯಿತು.

**ತಿದ್ದುಪಡಿ:**

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ3:29(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಸೇವೆ ಸಲ್ಲಿಸಿ ಖಾಯಂಗೊಂಡಿರುವ 17 ಮಂದಿ ಬೋಧಕೇತರ ಸಿಬ್ಬಂದಿಗಳಿಗೆ ಸೇವಾ ಸೌಲಭ್ಯಗಳನ್ನು ವಿಸ್ತರಿಸಿರುವ ಬಗ್ಗೆ.

**ನಿರ್ಣಯ:** As directed by the Hon'ble High Court of Karnataka in W.P.No.:43762-43766/2015 (S-RES) and W.P.No.:44642-44653/2015 and as per the resolution of the Syndicate dated 26.03.2018, the replies to the show cause notice submitted by the petitioners were considered by the Syndicate and rejected in the light of Rule 20 Note (4) of Karnataka State Civil service Rules.

Further the Syndicate Resolved to consider the temporary services rendered by the petitioners prior to their regularization vide University order dated 28.09.2005 only for the purpose of Pension and Leave if any, as per Rules.

It also resolved to withdraw the University order Nos. MU/45/EST (2)/2010-11 dated 16.02.2015, 30.06.2015 and all relevant orders issued subsequently , if any, and to recover the amount paid in excess, in equal monthly instalments.

**ಈ ಸಿಂಡಿಕೇಟು ಸಭೆಗೆ ಮಂಡಿಸಲಿರುವ ಕಾರ್ಯಸೂಚಿಗಳು :**

**ಕಾರ್ಯಸೂಚಿ ಸಂಖ್ಯೆ:** ಪ.ಜಾ.ಪ.ಪಂ. ಘಟಕ ವಿ.ಸ3:1(2018)

**ವಿಷಯ:** ದಿನಾಂಕ 27.04.2018ರಂದು ಜರಗಿದ ಪರಿಶಿಷ್ಟ ಜಾತಿ / ಪಂಗಡದ ಸ್ಥಾಯಿ ಸಮಿತಿ ಸಭೆಯ ನಡವಳಿ

**ನಿರ್ಣಯ:** ಅನುಮೋದಿಸಲಾಯಿತು. ಹಾಗೂ self or partially self finance ಕೋರ್ಸುಗಳ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಉಳಿದ ವಿದ್ಯಾರ್ಥಿಗಳಿಗೆ ಶುಲ್ಕ ಮರುಭರಣೆ ಪ್ರಕ್ರಿಯೆಯನ್ನು ತಕ್ಷಣವೇ ಪ್ರಾರಂಭಿಸ ಬೇಕೆಂದು ಸಭೆಯು ಕುಲಸಚಿವರು ಮತ್ತು ಹಣಕಾಸು ಅಧಿಕಾರಿ ಇವರುಗಳಿಗೆ ಸೂಕ್ತ ನಿರ್ದೇಶನ ನೀಡಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ವಿ.ಸ3:2(2018)

**ವಿಷಯ:** ಗಣಕಯಂತ್ರ ಕೇಂದ್ರಕ್ಕೆ ಅಗತ್ಯವಿರುವ 10KVA UPS ಮತ್ತು ಬ್ಯಾಟರಿಗಳನ್ನು ವಿಶ್ವವಿದ್ಯಾನಿಲಯದ ಧರಣಾಗುತ್ತಿಗೆ ದರದಲ್ಲಿ ಖರೀದಿಸಲು ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ವಿ.ಸ3:3(2018)

**ವಿಷಯ:** Council of Scientific and Industrial Research, Thiruvananthapuram ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪಿ.ಎಂ.ಇ.ಬಿ. ವಿ.ಸ3:4(2018)

**ವಿಷಯ:** ಭೌತಶಾಸ್ತ್ರ ವಿಭಾಗದ Positron Annihilation Laboratory ಗೆ Positron lifetime Spectrometer ಉಪಕರಣದ ಕೆಲವು ಬಿಡಿಭಾಗಗಳ ಖರೀದಿ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ದಿನಾಂಕ 21.05.2018ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ವಿ.ಸ3:5(2018)

**ವಿಷಯ:** Submission of Synopsis by Prof. Shankar Rao, C.N., Mangaluru for the award of D.Litt. degree by Mangalore University.

**ನಿರ್ಣಯ:** ಪ್ರಸ್ತಾವನೆಯನ್ನು ಒಪ್ಪಲಾಯಿತು ಮತ್ತು ಮುಂದಿನ ಕ್ರಮಕ್ಕಾಗಿ ಸ್ನಾತಕೋತ್ತರ ಸಮಾಜ ಶಾಸ್ತ್ರ ಅಧ್ಯಯನ ಮಂಡಳಿಗೆ ಶಿಫಾರಸ್ಸು ಮಾಡುವುದು ಎಂದು ನಿರ್ಧರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ವಿ.ಸ3:6(2018)

**ವಿಷಯ:** Drinking water purification system ನ್ನು ಒದಗಿಸುವ ಬಗ್ಗೆ.

**ನಿರ್ಣಯ:** ದಿನಾಂಕ 21.05.2018ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ವಿ.ಸ3:7(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕಚೇರಿ / ಸ್ನಾತಕೋತ್ತರ ವಿಭಾಗ / ಘಟಕ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರಗಳಲ್ಲಿರುವ ಜಾಬ್ ಟೈಪಿಸ್ಟ್‌ಗಳ ಮಾಸಿಕ ಸಂಭಾವನೆಯನ್ನು ಪರಿಷ್ಕರಿಸುವ ಬಗ್ಗೆ.

**ನಿರ್ಣಯ:** ದಿನಾಂಕ 01.06.2018 ರಿಂದ ಅನ್ವಯಿಸಿ (ಖಾಯಂ ನೆಲೆಯ ನೌಕರರಿಗೆ 2018ರ ಪರಿಷ್ಕೃತ ವೇತನ ಶ್ರೇಣಿಯು ವಿಸ್ತರಿಸಿದ ನಂತರ) ಈ ಕೆಳಗಿನಂತೆ ಮಾಸಿಕ ಸಂಭಾವನೆಯನ್ನು ಪರಿಷ್ಕರಿಸಲು ತೀರ್ಮಾನಿಸಲಾಯಿತು.

**ಜಾಬ್ ಟೈಪಿಸ್ಟ್‌ಗಳಿಗೆ:**

1. 5 ವರ್ಷಗಳಿಗೆ ಮೇಲ್ಪಟ್ಟು ಸೇವೆ ಸಲ್ಲಿಸಿದ್ದಲ್ಲಿ – ರೂ.12,000/-
2. 10 ವರ್ಷಗಳಿಗೆ ಮೇಲ್ಪಟ್ಟು ಸೇವೆ ಸಲ್ಲಿಸಿದ್ದಲ್ಲಿ – ರೂ.13,000/-
3. 15 ವರ್ಷಗಳಿಗೆ ಮೇಲ್ಪಟ್ಟು ಸೇವೆ ಸಲ್ಲಿಸಿದ್ದಲ್ಲಿ – ರೂ.15,000/-

**ಲ್ಯಾಬ್ ಅಸಿಸ್ಟೆಂಟ್‌ಗಳಿಗೆ :**

4. ಪದವೀಧರರಿಗೆ (UG) - ರೂ.12,000/-
5. ಸ್ನಾತಕೋತ್ತರ ಪದವೀಧರರಿಗೆ (PG) - ರೂ.15,000/-

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ವಿ.ಸ3:8(2018)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿಶೇಷಾಧಿಕಾರಿಯವರ ನೇಮಕದ ಕುರಿತು.

**ನಿರ್ಣಯ :** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ವಿ.ಸ3:9(2018)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ SPARSH Cell ನ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ.

**ನಿರ್ಣಯ :** ಮುಂದಿನ ಸಭೆಗೆ ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ವಿ.ಸ3:10(2018)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ SPARSH Cell ನ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ.

**ನಿರ್ಣಯ :** ಸಭೆಯು ಸದರಿ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಬಗ್ಗೆ ಗಂಭೀರವಾಗಿ ಚರ್ಚಿಸಿ ಇಂತಹ ಪ್ರಕರಣಗಳು ಪುನಃ ಮರುಕಳಿಸದಂತೆ ಡಾ.ಮೋಹನ್ ಎಸ್.ಸಿಂಘೆ ಮತ್ತು ಡಾ.ಯಶಸ್ವಿನಿ ಭಟ್ಟಂಗಾಯ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜ ಕಾರ್ಯ ವಿಭಾಗ ಇವರುಗಳಿಗೆ ಎಚ್ಚರಿಕೆ ಪತ್ರ ನೀಡುವುದಾಗಿ ನಿರ್ಣಯಿಸಲಾಯಿತು. ವಿಭಾಗದ ಬೆಳವಣಿಗೆಯ ಹಿತದೃಷ್ಟಿಯಿಂದ ಮತ್ತು ವಿಶ್ವವಿದ್ಯಾನಿಲಯದ ಗೌರವ ಕಾಪಾಡಲು ಅಧ್ಯಾಪಕರು ಒಬ್ಬರ ಮೋಲೊಬ್ಬರು ಆರೋಪ ಮಾಡುವುದನ್ನು ತಡೆಗಟ್ಟಲು ಸಿಂಡಿಕೇಟ್ ವಿಶ್ವವಿದ್ಯಾನಿಲಯದ ಆಡಳಿತಕ್ಕೆ ತಿಳಿಸಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ವಿ.ಸ3:11(2018)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ತುಳು ಅಧ್ಯಯನ ವಿಭಾಗವನ್ನು ಆರಂಭಿಸಿ ಶೈಕ್ಷಣಿಕ ವರ್ಷ 2018–19ನೇ ಸಾಲಿನಿಂದ ಎಂ.ಎ. ತುಳು ಪದವಿಯನ್ನು ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು ಇಲ್ಲಿ ಪ್ರಾರಂಭಿಸುವ ಬಗ್ಗೆ.

**ನಿರ್ಣಯ :** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಸಂಯೋಜನಕರ ನೇಮಕಾತಿಯ ಬಗ್ಗೆ ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು. ಅದರಂತೆ ಮಾನ್ಯ ಕುಲಪತಿಯವರು ಡಾ.ಗಣನಾಥ ಶೆಟ್ಟಿ ಎಕ್ಕಾರ್ ಇವರನ್ನು ಆಯೋಜನೆಯ ಮೇರೆಗೆ ಸಂಯೋಜಕರನ್ನಾಗಿ ನೇಮಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ವಿ.ಸ3:12(2018)

**ವಿಷಯ :** ಶೈಕ್ಷಣಿಕ ವರ್ಷ 2018–19ನೇ ಸಾಲಿನಿಂದ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಕಾನೂನು ಅಧ್ಯಯನ ಮತ್ತು ಸಂಶೋಧನ ವಿಭಾಗವನ್ನು ಪ್ರಾರಂಭಿಸಿ, ಎಲ್.ಎಲ್.ಎಂ. ಪದವಿಯನ್ನು ಪ್ರಾರಂಭಿಸುವ ಬಗ್ಗೆ.

**ನಿರ್ಣಯ :** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಪ್ರೊ. ಟಿ.ರಾಮಕೃಷ್ಣ ಇವರನ್ನು Ad-hoc Professor ಆಗಿ ಮತ್ತು ಪ್ರೊ.ಶಶಿಕಲಾ ಗುರುಪುರ ಇವರು Distinguished Adjunct Professor ಆಗಿ ನೇಮಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ವಿ.ಸ3:13(2018)

**ವಿಷಯ :** ಹೊಸ ವಾಹನ ಖರೀದಿಸಲು ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ :** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಅದರಂತೆ basic model Toyota Etios ಅನ್ನು ಖರೀದಿಸಲು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ವಿ.ಸ3:14(2018)

**ವಿಷಯ :** ಕುಲಸಚಿವ (ಪ) ಕಛೇರಿಗೆ ಅಗತ್ಯವಿದ್ದ 7.5 KVA Online with Isolation Transformer UPS ಮತ್ತು Battery ಗಳ ಖರೀದಿಗೆ ಘಟನೋತ್ತರ ಮಂಜೂರಾತಿ ಕುರಿತು.

**ನಿರ್ಣಯ :** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ವಿ.ಸ3:15(2018)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಇಲೆಕ್ಟ್ರಾನಿಕ್ಸ್ ವಿಭಾಗಕ್ಕೆ ಪೀಠೋಪಕರಣ ಖರೀದಿ ಕುರಿತು.

**ನಿರ್ಣಯ :** ದಿನಾಂಕ 21.05.2018ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ವಿ.ಸ3:16(2018)

**ವಿಷಯ :** ಶೈಕ್ಷಣಿಕ ವರ್ಷ 2018–19 ನೇ ಸಾಲಿಗೆ ನಿಗದಿತ ವಿದ್ಯಾರ್ಥಿ ಪರಿಮಿತಿಗಿಂತ ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿ ಹಾಗೂ ಹೆಚ್ಚುವರಿ ವಿಭಾಗಕ್ಕೆ ಅನುಮತಿ ನೀಡುವ ಮತ್ತು ಶುಲ್ಕ ನಿಗದಿ ಪಡಿಸುವ ಬಗ್ಗೆ.

**ನಿರ್ಣಯ :** ಮುಂದೂಡಲಾಗಿದೆ.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ವಿ.ಸ3:17(2018)

**ವಿಷಯ :** 2005–06 ರಿಂದ 2009–10ರ ವರೆಗಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸ್ನಾತಕೋತ್ತರ ವಿದ್ಯಾರ್ಥಿಗಳ ಹೆಚ್ಚುವರಿ ಭೋಜನ ಹಾಗೂ ವಸತಿಯ ಖರ್ಚು ಮರುಭರಣೆಯಾಗದಿರುವ ಬಗ್ಗೆ ಮತ್ತು ವಿಶ್ವವಿದ್ಯಾನಿಲಯದ ಲೆಟರ್‌ಹೆಡ್‌ನ್ನು ಖಾಸಗಿ ವಿಷಯಕ್ಕೆ ಬಳಸಿರುವ ಬಗ್ಗೆ ಇಲಾಖಾ ವಿಚಾರಣೆ – ವಿಚಾರಣಾ ವರದಿಯ ಕುರಿತು.

**ನಿರ್ಣಯ :** The Syndicate after careful consideration of all the aspects of the enquiry report dated 14.08.2014 and also the replies furnished by Sri.K.Purushotham Naik, Assistant Registrar, Administration Branch and Sri Swaminathan, Senior Assistant, SC/ST Cell, Mangalore University has come to the conclusion that the explanation submitted by them is not satisfactory and hence rejected the same.

The Syndicate taking a serious note of the grave misconduct in terms of Rule 3 of Mangalore University Employees Service (Conduct) Rules, has resolved to impose the punishment of compulsory retirement from University as provided under Statute 7 (vi) of the Statute governing Classification Control and Appeal Rules of Employees of Mangalore University on Sri Purushotham Naik, Assistant Registrar, Administrative Branch, Mangalore University and on Sri Swaminathan, Senior Assistant, SC/ST Cell, Mangalore University with immediate effect. It also resolved to recover the monetary loss of Rs.7,61,250/- (Rupees Seven Lakhs Sixty One Thousand Two hundred and fifty only) caused to the University, equally from their pensionary benefits as provided under Statute 7 (iii) of the Mangalore University Employees Classification Control and Appeal Rules Statutes.

Further the Syndicate also taking a serious note of the grave misconduct in terms of Rule 3 of Mangalore University Employees (Conduct) Rules, has resolved to impose the punishment of withholding one increment with cumulative effect as provided under Statute 7 (iv) (b) of the Statute governing Classification Control and Appeal Rules of Employees of Mangalore University on Sri Purushotham Naik, Assistant Registrar, Administrative Branch, Mangalore University for having misused the University letter head and committed forgery.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ವಿ.ಸ3:18(2018)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿಶೇಷ ಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದ ಉಚಿತ ಊಟ, ವಸತಿ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ.

**ನಿರ್ಣಯ :** ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಪ್ರವೇಶಾತಿ ಪಡೆದ ವಿಶೇಷ ಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದ ಊಟ ಮತ್ತು ವಸತಿ ಸೌಲಭ್ಯವನ್ನು ಉಚಿತವಾಗಿ ನೀಡುವುದು ಹಾಗೂ ಈವರೆಗೆ ಅವರು ವಿಶ್ವವಿದ್ಯಾನಿಲಯಕ್ಕೆ ಪಾವತಿಸಿರುವ ಎಲ್ಲಾ ರೀತಿಯ ಶುಲ್ಕಗಳನ್ನು ಸದರಿ ವಿದ್ಯಾರ್ಥಿಗಳಿಗೆ ಮರುಪಾವತಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ವಿ.ಸ3:19(2018)

**ವಿಷಯ :** ಡಾ. ಶಾಮಸುಂದರ್ ಜೆ., ಸಹಾಯಕ ಪ್ರಾಧ್ಯಾಪಕರು, ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ ಇವರಿಗೆ ಅಮಾನತು ಅವಧಿಯಲ್ಲಿ ಜೀವನ ನಿರ್ವಹಣೆ ಭತ್ಯೆ ಪಾವತಿಸುವ ಬಗ್ಗೆ.

**ನಿರ್ಣಯ :** The Syndicate resolved to enchance the subsistence allowance to Dr.Shamsundar .J. Assistant Professor, Department of Human Consiousness and Yogic Sciences, Mangalore University, Mangalagangothri with immediate effect from 50% to 75% w.e.f. from 19.02.2018. As provided under Rule 98 (1) of Karnataka Civil Service Rules, since the Departmental Enquiry could not be completed within the stipulated period of Six months.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ವಿ.ಸ3:20(2018)

**ವಿಷಯ :** ಡಾ. ಶಾಮಸುಂದರ್ ಜೆ., ಸಹಾಯಕ ಪ್ರಾಧ್ಯಾಪಕರು, ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ ಇವರ ಮೇಲಿನ ದೂರುಗಳ ಬಗ್ಗೆ ನಡೆಸಿದ ಇಲಾಖಾ ವಿಚಾರಣೆಯ ವರದಿ – ಶಿಸ್ತು ಕ್ರಮ ಕೈಗೊಳ್ಳುವ ಕುರಿತು.

**ನಿರ್ಣಯ :** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ವಿ.ಸ3:21(2018)

**ವಿಷಯ :** ಡಾ. ಎಂ. ಜಯಶಂಕರ್, ಪ್ರಾಧ್ಯಾಪಕರು, ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇವರ ಮೇಲಿನ ದೂರುಗಳ ಬಗ್ಗೆ ನಡೆಸಿದ ಇಲಾಖಾ ವಿಚಾರಣೆಯ ವರದಿಯ ಮೇಲೆ ಸಮಜಾಯಿಷಿಕೆ ನೀಡಿದ ಬಗ್ಗೆ.

**ನಿರ್ಣಯ :** The Syndicate after careful consideration of all the aspects of the enquiry report dated 26.04.2017 and also the replies furnished by Dr.M.Jayashankar, Professor, Dept. of Studies in Microbiology, Post Graduate Centre at Chikka Auvara has come to the conclusion that Dr.M.Jayashankar is found to be guilty of two charges leveled against him and on finding the explanation submitted by him is not satisfactory has rejected the same.

The Syndicate taking a serious note of the grave misconduct in terms of Rules 3 of Mangalore University Employees Service (Conduct) Rules, has resolved to impose the punishment of reducing his pay to the minimum of pay scale of the post held by him under **Career Advancement Scheme** if any for a period of 5 years as provided under Statute 7 (v) (a) of the Statute governing Classification Control and Appeal Rules of Employees of Mangalore University with immediate effect.

During this period of 5 years he will not be entitled to earn any increments, but his pay will be restored on completion of 5 years.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ವಿ.ಸ3:22(2018)

**ವಿಷಯ :** ಇಲೆಕ್ಟ್ರಾನಿಕ್ಸ್ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯದ – Cloud based System ಅಳವಡಿಸಲು ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ :** ದಿನಾಂಕ 21.05.2018ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ವಿ.ಸ3:23(2018)

**ವಿಷಯ :** ಬಿ.ಎಡ್. (ಮುಕ್ತ ಮತ್ತು ದೂರ ಶಿಕ್ಷಣ) ಸಂಪರ್ಕ ಕಾರ್ಯಕ್ರಮಕ್ಕೆ ಅಧ್ಯಯನ ಕೇಂದ್ರದ ಸಿಬ್ಬಂದಿಗಳಿಗೆ ಸಂಭಾವನೆ ದರ ನಿಗದಿ ಪ್ರಸ್ತಾವನೆ ಬಗ್ಗೆ.

**ನಿರ್ಣಯ :** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ವಿ.ಸ3:24(2018)

**ವಿಷಯ :** IQAC ಸಭೆಯ ನಡಾವಳಿ ಹಾಗೂ 2016–17 ರ AQAR ಅನುಮೋದನೆ ಬಗ್ಗೆ.

**ನಿರ್ಣಯ :** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ವಿ.ಸ3:25(2018)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ವ್ಯವಹಾರ ಆಡಳಿತ ವಿಭಾಗದಲ್ಲಿ ಜವಾನರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ದಿ. ಟಿ. ಮೋಹನ್ ಇವರ ಮಗಳಾದ ಕು. ವನಿತ ಟಿ. ಇವರಿಗೆ ವಿಶ್ವವಿದ್ಯಾನಿಲಯದಲ್ಲಿ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡುವ ಬಗ್ಗೆ.

**ನಿರ್ಣಯ :** ಕು.ವನಿತ ಟಿ. ಇವರನ್ನು ಅನುಕಂಪದ ಆಧಾರದಲ್ಲಿ ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕ ಹುದ್ದೆಗೆ ನೇಮಕ ಮಾಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ವಿ.ಸ3:26(2018)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ Gift Center ನ್ನು ಮಂಗಳೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಪತ್ತಿನ ಸಹಕಾರಿ ಸಂಘ ಮಂಗಳಗಂಗೋತ್ರಿ ಇವರಿಗೆ ಹಸ್ತಾಂತರಿಸುವ ಬಗ್ಗೆ.

**ನಿರ್ಣಯ :** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು ಮತ್ತು ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ವಿಭಾಗಗಳಿಗೆ/ಅಧ್ಯಯನ ಕೇಂದ್ರಗಳಿಗೆ ಕಡ್ಡಾಯವಾಗಿ Gift Center ಇಲ್ಲಿಂದಲೇ ವಸ್ತುಗಳನ್ನು ಖರೀದಿಸುವಂತೆ ಸುತ್ತೋಲೆಯನ್ನು ಕಳುಹಿಸಲು ಕುಲಸಚಿವರಿಗೆ ಸೂಚಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ವಿ.ಸ3:27(2018)

**ವಿಷಯ :** ಶೈಕ್ಷಣಿಕ ವರ್ಷ 2018–19ನೇ ಸಾಲಿಗೆ 'ಉಡುಪಿ ಇನ್ಸ್ಟಿಟ್ಯೂಟ್ ಆಫ್ ಹೋಟೆಲ್ ಆಂಡ್ ಟೂರಿಸಂ ಸಾಯನ್ಸ್' ಮಣಿಪಾಲ ಎಂಬ ವಿದ್ಯಾ ಸಂಸ್ಥೆಗೆ ಬಿ.ಎಸ್ಸಿ. (ಫುಡ್ ಟೆಕ್ನಾಲಜಿ) ಮತ್ತು ಬಿ.ಕಾಂ. ಕೋರ್ಸುಗಳಿಗೆ ವಿಸ್ತರಣಾ ಸಂಯೋಜನೆ ನೀಡುವ ಬಗ್ಗೆ.

**ನಿರ್ಣಯ :** ವಿಸ್ತರಣಾ ಸಂಯೋಜನೆ ನೀಡುವ ಬಗ್ಗೆ ಪರಿಶೀಲಿಸಲು ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಏಕ ಸದಸ್ಯ ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು.

ಪ್ರೊ. ಸಿ. ಕೆ. ಕಿಶೋರ್ ಕುಮಾರ್ – ಅಧ್ಯಕ್ಷರು
ಪ್ರೊ. ಚಂದ್ರಕಲಾ ಶೆಣೈ – ಸದಸ್ಯರು

**ಕಾರ್ಯಸೂಚಿ ಸಂಖ್ಯೆ:** ಆಡಳಿತ ವಿ.ಸ3:28(2018)

**ವಿಷಯ :** ಪೆಟ್ರೋಲ್ ಬಂಕ್ ಬದಲಾವಣೆ ಬಗ್ಗೆ.

**ನಿರ್ಣಯ :** ವಿಶ್ವವಿದ್ಯಾನಿಲಯದ ಕ್ಯಾಂಪಸ್‌ಗೆ ಹತ್ತಿರದಲ್ಲಿ ಅಂದರೆ 5 ಕಿ.ಮೀ. ವ್ಯಾಪ್ತಿಯೊಳಗೆ ಬರುವ ಹಾಗೂ ಸಾಲದ ರೂಪದಲ್ಲಿ (Credit) ನೀಡಲು ಒಪ್ಪಿಕೊಳ್ಳುವ ಸಂಸ್ಥೆಯಿಂದ ಪೆಟ್ರೋಲ್ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ವಿ.ಸ3:29(2018)

**ವಿಷಯ :** ಕುಲಪತಿಗಳ ನೇಮಕಾತಿಗೆ ಸಂಬಂಧಿಸಿದ ಶೋಧನಾ ಸಮಿತಿಗೆ ಸಿಂಡಿಕೇಟ್‌ನಿಂದ ಒಬ್ಬರನ್ನು ನಾಮನಿರ್ದೇಶನ ಮಾಡುವ ಬಗ್ಗೆ.

**ನಿರ್ಣಯ :** ಒಮ್ಮತದಿಂದ ಅನುಮೋದಿಸಿ, ಸದರಿಯವರ ಹೆಸರು ಮತ್ತು ವಿವರಗಳನ್ನು ಸರಕಾರಕ್ಕೆ ಕಳುಹಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ವಿ.ಸ3:30(2018)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯವು Muvva Edukul India Pvt Ltd., Bengaluru ಎಂಬ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ :** ಒಡಂಬಡಿಕೆಯನ್ನು ಈ ಕೆಳಗಿನ ತಿದ್ದುಪಡಿಯೊಂದಿಗೆ ಅನುಮೋದಿಸಲಾಯಿತು.

1. Sl.No.2 of the Objectives of the MOU changed as – University convocation and other applications
2. Cost – as per mutually agreed terms.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |